**ಅಸಲು ದಾವಾ ನಂಃ 118/2018**
**ಪಿ.ಡಬ್ಲ್ಯೂಃ 1 ,**

**<u>ದಿನಾಂಕ :24-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟಿ ಸವಾಲು :- ಶ್ರೀ.ಪಿ.ಡಿ. ಪ್ರತಿವಾದಿ ಪರ ವಕೀಲರಿಂದ :</u>**

ನಾನು ವಕೀಲ ಇದ್ದೇನೆ. ನನಗೆ ಕಾನೂನು ಮತ್ತು ವ್ಯವಹಾರ ಬಗ್ಗೆ ಜ್ಞಾನ ಇದೆ. ನನ್ನ ತಂದೆ 7ನೇ ತರಗತಿ ಓದಿರುತ್ತಾರೆ. ನಮ್ಮ ತಂದೆಯವರು ಕನ್ನಡ ಭಾಷೆಯಲ್ಲಿ ಸಹಿ ಮಾಡುತ್ತಾರೆ. ಸಾಕ್ಷಿ ಒಂದು ದಾಖಲೆಯನ್ನು ತೋರಿಸಿ ಅದರಲ್ಲಿ ತಮ್ಮ ತಂದೆ ಸಹಿ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ. ಸದರಿ ದಾಖಲೆ ಖರಿದಿ ಪತ್ರ, ನಮ್ಮ ತಂದೆಯೇ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ಕಾನೂನು ಪರಿಜ್ಞಾನ ಉಳ್ಳ ಕಾರಣ ಈ ಕೇಶಿನ ಅನುಕೂಲಕ್ಕಾಗಿ ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಕೇಸಿಗಾಗಿ 2014 ರಲ್ಲಿ Mrs: ರಾಜೇಶ ಇವರ ಜೊತೆಗೆ ಖರಿದಿ ಕರಾರು ಪತ್ರವನ್ನು ಸೃಷ್ಟಿಸಿ ಮತ್ತು ಅದನ್ನೇ ರದ್ದು ಪಡಿಸಿದ್ದೇನೆ ಎಂದರೆ ಸರಿಯಲ್ಲ . ಸದರಿ 1989 ರ ಖರಿದಿ ಪತ್ರ ಪ್ರಕಾರ ನನ್ನ ತಂದೆಯವರು ಸದರಿ ದಾವೆ ಆಸ್ತಿಯನ್ನು ಆ ಖರಿದಿ ಪತ್ರದ ಪ್ರಕಾರ ಪ್ರತಿವಾದಿಯ ತಂದೆಗೆ ಸ್ವಾಧೀನ ನೀಡಿದ್ದಾರೆ ಎಂದರೆ ಸರಿಯಲ್ಲ . ನಂತರ 1ಪ್ರತಿವಾದಿ ತಂದೆಯು ಮರಣದ ನಂತರ ತನ್ನ ಮಗ 1ಪ್ರತಿವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ . ಸದರಿ ಹಕ್ಕು ಬದಲಾವಣೆ ಪ್ರಕಾರ 1ಪ್ರತಿವಾದಿ ಹೆಸರು ಮತ್ತು ಅವರ ತಂದೆ ಹೆಸರು 1989 ರಿಂದ ದಾವಾ ಆಸ್ತಿ ಪಹಣಿಯಲ್ಲಿ ಸ್ವಾಧೀನ ಮತ್ತು ಮಾಲಿಕ ಅಂತಾ ಇಲ್ಲಿಯವರೆಗೆ ಪಹಣಿಯಲ್ಲಿ ಹೆಸರು ಇದೆ ಎಂದರೆ ಸಾಕ್ಷಿ ಮೆಮೋರಂಡಮ್ ಪಾರ್ಟಿಶನ ಪ್ರಕಾರ ನಮ್ಮ ಹೆಸರು ಬಂದಿದೆ ಎಂದು ನುಡಿಯುತ್ತಾರೆ.

**ಅಸಲು ದಾವಾ ನಂಃ 118/2018**
**ಪಿ.ಡಬ್ಲ್ಯೂಃ 1 ,**

1ನೇ ಪ್ರತಿವಾದಿ ಹೆಸರಿನಲ್ಲಿ ದಾವಾ ಆಸ್ತಿ ಇದ್ದ ಕಾರಣ ಪ್ರತಿವಾದಿ 2 ಮತ್ತು 3 ರವರಿಗೆ ದಾನ ಪತ್ರ ಮಾಡಿದ್ದಾರೆ ಎಂದರೆ ಸಾಕ್ಷಿ 1ನೇ ಪ್ರತಿವಾದಿ ಹೆಸರಿಗೆ ಇದ್ದ ಪಹಣಿಯನ್ನು ಸೃಷ್ಟಿಸಿದ್ದಾರೆ ಎಂದು ನುಡಿಯುತ್ತಾರೆ. ಸದರಿ 1989ರ ಖರಿದಿ ಪತ್ರದ ಪ್ರಕಾರ 1ನೇ ಪ್ರತಿವಾದಿ ನಂತರ ಪ್ರತಿವಾದಿ ನಂ-2 ಮತ್ತು 3 ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ . ನಮ್ಮ ತಂದೆಯವರು ದಾವಾ ಆಸ್ತಿಯನ್ನು ಮಾರಿದ್ದು ನಮಗೆ ಗೊತ್ತಿದ್ದರೂ ಸಹ ನಮ್ಮ ತಂದೆ ತೀರಿ ಹೋದ ನಂತರ ಆಸ್ತಿಯನ್ನು ಹೊಡೆಯುವ ದುರುದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**